ನ್ಯಾಯ ಪಂಚಾಯಿತಿ ಮಾಡಿದರಂತೆ. ಅಂದರೆ ನನಗೇನು ಸ್ವಂತ ವ್ಯಕ್ತಿತ್ವವೇ ಇಲ್ಲವೇ? ನಾನೇನು ವೇಶ್ಯೆಯೇ? ಹಾಗೆ ಆಗುವುದಿಲ್ಲ, ನನಗೂ ಒಂದು ಮನಸ್ಸಿದೆ ತಾನೇ? ಆತ ಬಯಸಿಬಿಟ್ಟರೆ ನಾನು ಒಪ್ಪಿಬಿಡಬೇಕೇ? ಆತನ ಸಂಗ ಬೇಕು ಎಂದು ನನಗೂ ಅನ್ನಿಸಬೇಡವೇ? ನಾನು ಒಪ್ಪಿದವನನ್ನೇ ನಾನು ಕೂಡುವುದು ಎಂದು ನಾನೂ ದನಿ ಎತ್ತರಿಸಿದೆ.

ಆದರೇನು ಮಾಡಲಿ. ನನ್ನ ನಾಲ್ಕು ಗೋಡೆಗಳಾಚೆ ಎಲ್ಲ ಸುದ್ದಿ ಹರಿದಾಡಿಬಿಟ್ಟಿತ್ತು. ಹಿರಿಯರ ತೀರ್ಮಾನವೇ ಅದಾಗಿದ್ದರಿಂದ ಯಾರೂ ಹೆಣ್ಣು ಕೇಳಲೆಂದು ಮನೆವರೆಗೆ ಬರಲೇ ಇಲ್ಲ. ಆದರೆ ಇವತ್ತೊಬ್ಬ, ನಾಳೆ ಒಬ್ಬ ನನ್ನ ಮನೆಯ ಬಳಿ ಅವರವರೇ ತೀರ್ಮಾನಿಸಿಕೊಂಡು ಪಾಳಿ ಹಚ್ಚಿ ಸುಳಿದಾಡಲಾರಂಭಿಸಿದ್ದರು. ಆದರೆ ನನಗದು ಗೊತ್ತಿರದೇ ಯಾರನ್ನೂ ನಾನು ಹತ್ತಿರ ಕೂಡ ಸೇರಿಸಲಿಲ್ಲ.

ಒಂದು ದಿನ ಒಬ್ಬ ಬಂದ. ಅಷ್ಟು ದೂರದಲ್ಲಿ ನೆರೆದಿದ್ದ ಜನ ಏನೇನು ಮಾತಾಡಿಕೊಂಡರೋ, ಅವನನ್ನು ಅಡ್ಡಿಪಡಿಸಲು ಯಾರೂ ಮುಂದೆ ಬರಲೇಯಿಲ್ಲ. ಹೆಣ್ಣನ್ನು ಸೇರಲು ಪ್ರಾಣಿ–ಪಕ್ಷಿಗಳಲ್ಲಿ ಸೆಣಸಾಟ ನಡೆದು ಗೆದ್ದ ಗಂಡು ಮುಂದೆ ಬರುವಂತೆ ಬಂದಿರಬೇಕು ಎಂದು ನನಗಾದರೂ ಅನ್ನಿಸಿತು. ಯಾರೋ ಪರಾಕ್ರಮಿಯೇ ಇರಬೇಕು, ಅವರನ್ನೆಲ್ಲ ಮಣಿಸಿಯೇ ಬಂದಿರಬೇಕು ಎಂದು ನಾನಾದರೂ ಭಾವಿಸಿದೆ. ಅಲ್ಲದೆ ಆತನೂ ರಾಜಗಾಂಭೀರ್ಯದ ನಡೆಯುಳ್ಳವನಾಗಿದ್ದ. ಮುಖದಲ್ಲಿ ರಾಜಕಳೆಯ ಜತೆಗೆ ಮೈಮೇಲೆ ಶ್ರೀಮಂತಿಕೆಯ ಪ್ರತೀಕವೆಂಬಂತೆ ಬಂಗಾರದ ಒಡವೆಗಳಿದ್ದವು. ನನ್ನ ಮೊದಲ ನೋಟಕ್ಕೇ ಆತ ಮರುಳಾಗಿಬಿಟ್ಟ. ನಾನೂ ಮರುಳಾದೆನ್ನಿ. ಆವರೆಗೆ ಅಂಥ ಸ್ಫುರದ್ರೂಪಿಯನ್ನು ನಾನು ಕಂಡಿರಲೇ ಇಲ್ಲ. ತನ್ನ ಕೊರಳ ಕಂಠೀಹಾರವನ್ನು ತೆಗೆದು ನನಗೆ ಉಡುಗೊರೆ ನೀಡಲು ಬಂದ. ನಾನು ಕೈನೀಡುವ ಬದಲು ಕೊರಳನ್ನೇ ಒಡ್ಡಿದೆ. ತಾನು ನನ್ನನ್ನು ವರಿಸಿ ಮದುವೆಯಾಗುವುದಾಗಿ ಹೇಳಿದ. ನಾನು ಊರವರು ಹೀಗೆ ತೀರ್ಮಾನ ಮಾಡಿದ್ದಾರೆಂದು ಕೇಳಲ್ಪಟ್ಟಿದ್ದೇನೆ ಎಂದೆ. ಯಾರ ತೀರ್ಮಾನ ಎಂತೇ ಇರಲಿ, ನನಗೆ ನೀನು ಬೇಕು ಅಷ್ಟೇ ಎಂದು ನನ್ನಲ್ಲಿ ಅನುರಕ್ತನಾದ. ತಾನು ಭೂಮಿ ಮೇಲೆ ಇಂಥ ಸೌಂದರ್ಯವನ್ನು ಕಂಡೇ ಇಲ್ಲ ಎಂದು ಕನವರಿಸಿದ. ನನ್ನ ಮುಂಗುರುಳನ್ನು ನೇವರಿಸಿ, ಎಂಥ ನಯವಾದ ಹೆರಳು ಎಂದು ಹಲುಬಿದ.

ನನ್ನ ಮೂಗನ್ನು ತನ್ನ ಮೂಗಿನಿಂದ ತೀಡಿ, ಎಂಥ ಸಂಪಿಗೆಯಂಥ ನಾಸಿಕ ಎಂದು ಮೂಸಿದ. ಕಣ್ಣುಗಳ ಕರಿಗುಡ್ಡೆಗಳ ಗಾಜುಗಳಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಅಲ್ಲಿ ತನ್ನ ಹೊರತು ಯಾರದೂ ಪ್ರತಿಬಿಂಬ ಮೂಡಬಾರದು ಎಂದ. ನನ್ನ ನಡುವನ್ನು ಎರಡೂ ಕೈಗಳಲ್ಲಿ ಬಳಸಿ, ಹಾಗೇ ಕೈಜಾರಿಸಿದವನು ನಿತಂಬದಾಕಾರಕ್ಕೆ ಹುಚ್ಚೆದ್ದುಹೋದ. ನಾನು ನಾಚಿ ಕೈ ಕೊಸರಿ ಆ ಕಡೆ ಓಡಿಹೋದರೆ, ಅದೇನು ನವಿಲಿನ ನಡಿಗೆ ಎಂದ. ನನ್ನ ಸೌಂದರ್ಯದ ಮೂಲ ಎಲ್ಲಿದೆ ಎಂಬುದೇ ಅವನಿಗೆ ತಿಳಿಯದಾಗಿ ಒಂದೊಂದೇ ಅಂಗದ ಬದಲು ಇಡೀ ದೇಹವೇ ಸೌಂದರ್ಯದ ಗಣಿ ಎಂದು ಆಕ್ರಮಿಸಲಾರಂಭಿಸಿದ. ಮೋಹದ ಮಾಯೆಯೆದುರು ಸೋತು ಸುಣ್ಣವಾದ! ದಿನ, ವಾರ, ತಿಂಗಳು ಕಳೆದರೂ ಆತ ತೆರಳಲಿಲ್ಲ. ಆತನ ದಾಹ ಇನ್ನೂ ಇಂಗಿರಲಿಲ್ಲ. ಆದರೆ ಯಾವಾಗ ನನ್ನ ಒಡಲಲ್ಲೊಂದು ಜೀವ ಒಡಮೂಡಿತೋ, ಆಗ ತಾನು ಮಗಧದರಸ ಬಿಂಬಸಾರನೆಂದ. ಈವರೆಗೆ ಲೋಕದ ಅಪವಾದಕ್ಕೆ ಹೆದರಿ ಗುರುತು ಮುಚ್ಚಿಟ್ಟುಕೊಂಡಿದ್ದುದಾಗಿ ಅರುಹಿದ. ಊರ ಯಾವ ಗಂಡಸರೂ ನನ್ನ ಮನೆ ಕಡೆ ಸುಳಿಯದಿರುವುದಕ್ಕೆ ಅದೇ ಕಾರಣ ಎಂದು ತಿಳಿಯಿತು. ಆತನ ಸೈನಿಕರು ನನ್ನ ಬಿಡಾರದ ಸುತ್ತ ಕಣ್ಣಳತೆಯ ದೂರದಲ್ಲಿ ಪಹರೆ ಏರ್ಪಡಿಸಿದ್ದು, ಜತನದಿಂದ ಕಾವಲು ಕಾಯುತ್ತಿದ್ದಾರೆಂದೂ ತಿಳಿಯಿತು.

ಬಿಂಬಸಾರ ಪಾಟಲೀಪುತ್ರಕ್ಕೆ ಹೋಗೋಣ ನಡಿ ಎಂದ. ಆತಗೆ ಈಗಾಗಲೇ ಮೂವರು ಪತ್ನಿಯರಿರುವರೆಂಬ ಮಾಹಿತಿ ನನಗಾಗಲೇ ಸಿಕ್ಕಿತ್ತು. ಅಂತಿದ್ದರೆ ವಿಟನಂತೆ ನೀನು ಇಷ್ಟು ದಿನ ಬಂದು ಹೋದುದೇಕೆ? ಊರ ತುಂಬಾ ನಾನು ವೇಶ್ಯೆಯೆಂಬ ವಿಚಾರ ಪ್ರಚಾರವಾಗಿಯಾಗಿದೆ. ಅಲ್ಲಿ ಬಂದರೂ ನನಗೆ ರಾಣಿಯ ಪಟ್ಟವನ್ನೇನೂ ನೀಡುವುದಿಲ್ಲವಲ್ಲ. ನಾನು ಎಲ್ಲೂ ಬರುವುದಿಲ್ಲ, ಇಲ್ಲಿಯೇ ಇರುವೆ ಎಂದು ಹಟ ಹಿಡಿದೆ. ಅಲ್ಲದೆ ಕೂಸಿನ ಜವಾಬ್ದಾರಿಯೂ ನನ್ನದೇ ಎಂದೆ. ನಿಮಗಿಷ್ಟವಾದಾಗ ಇತ್ತ ಬಂದು ಹೋಗಬಹುದೆಂದೆ. ಆಗ ಬಿಂಬಸಾರ ಯುದ್ಧದಂಥ ವಾತಾವರಣದಿಂದ ವೈಶಾಲಿಯನ್ನು ಮುಕ್ತಗೊಳಿಸಿ ತನ್ನೂರಿಗೆ ಹೊರಟ. ಮತ್ತೆ ಮತ್ತೆ ಬರುತ್ತಿರುವೆನೆಂದ. ಅಪಾರ ಧನಕನಕ ನೀಡಿ, ತೋಟ ತುಡಿಕೆಯನ್ನು ಮಾಡಿಕೊಟ್ಟು ಹೊರಟುಹೋದ. ಹೊರಟು ಹೋದವನು ನನ್ನನ್ನು ಮರೆತೇಬಿಟ್ಟ.

ಬಿಂಬಸಾರನ ನಿರ್ಗಮನದ ನಂತರ ಊರವರ ಸರದಿ. ಹೀಗೇ ಎಷ್ಟೋ ವರುಷಗಳ ಕಾಲ ನಾನು ನಗರವಧುವಾಗಿ ಜೀವಿಸುತ್ತಿದ್ದೆ. ಒಂದು ದಿನ ಬುದ್ಧ ತನ್ನ ಭಿಕ್ಕುಗಳ ಪರಿವಾರದೊಡನೆ ತೆರಳುತ್ತಿರುವಾಗ ಮಧ್ಯಾಹ್ನದ ಬಿಸಿಲಿಗೆ ಬಾಯಾರಿ ನನ್ನ ಆಮ್ರವನದ ಬಾವಿಯಲ್ಲಿ ನೀರು ಕುಡಿಯಲು ನಿಂತರಂತೆ. ಜತೆಗೆ ಉಪವನದಲ್ಲಿದ್ದ ಮಾವಿನಹಣ್ಣಿಗೆ ಮನಸೋತು, ಇದೇ ಇವತ್ತಿನ ಭಿಕ್ಷೆ, ಹಿಂದೆ ಎಷ್ಟೋ ದಿನಗಳ ಕಾಲ ಇದನ್ನು ತಿಂದೇ ಬದುಕಿದ್ದುದಾಗಿ ತನ್ನ ಶಿಷ್ಯಂದಿರಿಗೆ ಹೇಳುತ್ತಾ ಮನಸಾರೆ ಸೇವಿಸಿದರಂತೆ. ವಿಷಯ ತಿಳಿಯಿತು. ಬುದ್ಧರ ಆಗಮನದ ವಿಚಾರ ಅದಾಗಲೆ ಇಡೀ ಲಿಚ್ಛವಿಯ ತುಂಬಾ ಪಸರಿಸಿತ್ತು. ಅದಾಗಲೇ ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದ ಪ್ರವಚನ ಮಾಡುತ್ತಾ ಲಕ್ಷಾಂತರ ಅನುಯಾಯಿಗಳನ್ನು ಸೃಷ್ಟಿಸಿಕೊಂಡಿದ್ದರು. ಸಾವಿರಾರು ಜನರ ಶಿಷ್ಯಪಡೆ ಯಾವಾಗಂದರೆ ಆವಾಗ ಉದುರುವ ಅನುಭವಾಮೃತಗಳನ್ನು ಬಾಚಿಕೊಳ್ಳುವವರಂತೆ ಹಿಂಬಾಲಿಸುತ್ತಲೇ ಇರುತ್ತಿತ್ತು.

ನನ್ನ ವನದಲ್ಲಿ ಬುದ್ಧ ಬಿಡಾರ ಹೂಡಿರುವುದಕ್ಕಿಂತ ಅಪರಿಮಿತವಾದ ಸಂತಸ ಇನ್ನಾವುದಿದೆಯೆಂದು ಬಿಳಿಯ ಸೀರೆಯನ್ನುಟ್ಟು ನಾನೂ ಕಾಣಲು ಹೋದೆ. ನನ್ನ ನೋಡಿದ ಕೂಡಲೇ ಅವರಿಗೆ ಚಿತ್ತಚಾಂಚಲ್ಯವಾಗಬಹುದೆಂದು ಭಾವಿಸಿದೆ. ಆದರೆ ನನ್ನ ಅನುಮತಿ ಪಡೆಯದೆ ತೋಟದ ಮಾವಿನಹಣ್ಣುಗಳಿಗೆ ಲಗ್ಗೆ ಹಾಕಿದ್ದರಿಂದ ವಿಚಾರಿಸಿಕೊಳ್ಳಲು ಬಂದಿರಬಹುದೆಂದು ಬೆದರಿ ಶಿಷ್ಯ ಆನಂದನಲ್ಲಿ ನಾನು ಯಾರೆಂದು ವಿಚಾರಿಸಿದರಂತೆ. ಆನಂದ ಕಿವಿಯಲ್ಲಿ, 'ಬೊಂತೆ, ಇದೇನು ನೀವು ಆ ಚೆಲುವೆಣ್ಣನ್ನು ತದೇಕದೃಷ್ಟಿಯಿಂದ ನೋಡುತ್ತಿರುವಿರಿ. ಸರ್ವಸಂಗ ಪರಿತ್ಯಾಗ ಮಾಡಿದ ಪರಿವ್ರಾಜಕನಿಗೆ ಇದು ತರವೇ?' ಎಂದು ಚೇಷ್ಟೆ ಮಾಡಿರಬೇಕು. ಆಗ ಬುದ್ಧರು, 'ಕಣ್ಣು ಚೆಲುವನ್ನು ಗ್ರಹಿಸುವುದು, ಮೂಗು ಸುವಾಸನೆಯನ್ನು ಆಘ್ರಾಣಿಸುವುದು ತಪ್ಪಲ್ಲ. ಆದರೆ ಆ ಚೆಲುವು, ಆ ಸುವಾಸನೆ ತನ್ನದಾಗಬೇಕು, ತನ್ನದಷ್ಟೇ ಆಗಿರಬೇಕೆಂಬ ಮೋಹ ಸರಿಯಲ್ಲ. ಅಷ್ಟೇ...' ಎಂದಂತಾಯಿತು. ಆ ಮಾತುಗಳು ನನ್ನ ಕುರಿತು ಇದೆಯೆಂದರಿತರೂ, ಕೇಳಿಸಿದರೂ ಕೇಳಿಸದಂತೆ ಇದ್ದುಬಿಟ್ಟೆ.

ನಾನು, 'ತಮ್ಮಂಥ ಮಹನೀಯರು ನನ್ನ ವನದಲ್ಲಿ ಬೀಡುಬಿಟ್ಟಿರುವುದರಿಂದ ಉಪಕೃತಳಾಗಿದ್ದೇನೆ. ನಮ್ಮ ತೋಟದ ಭೂಮಿ ಪಾವನವಾಯಿತು. ಇನ್ನು ನಮ್ಮ ಮನೆಯವರೆಗೂ ಚಿತ್ತಹರಿಸಿದರೆ ನಿಮ್ಮ ಪಾದದೂಳಿಯಿಂದ ಪುನೀತಳಾಗುವೆನು' ಎಂದೆ.

'ಹಾಗಾದರೆ ನಾಳೆಯ ಭಿಕ್ಷೆಗೆ ಅಲ್ಲಿಗೇ ಬರುವೆ'ವೆಂದರು. ನನ್ನ ಸಂತಸಕ್ಕೆ ಪಾರವೇ ಇಲ್ಲದಂತಾಯಿತು. ಸಂಭ್ರಮದಿಂದ ನಾನು ಚಿಗರೆಯಂತೆ ಜಿಗಿಯುತ್ತ ಮನೆಗೆ ಬರುವಷ್ಟರಲ್ಲಿ ಲಿಚ್ಛವಿಯ ರಾಜಕುಮಾರನ ರಥ, ಕುದುರೆಗಳು ಆಮ್ರವನದತ್ತ ಹೋದವು. ನಾಳೆ ತಮ್ಮ ಅರಮನೆಗೆ ಬಿಜಯಂಗೈಯಬೇಕೆಂದು ಆತ ಕೇಳಿದಾಗ, 'ದಿನಕ್ಕೊಮ್ಮೆ ಮಾತ್ರ ಉಣ್ಣುವ ಭಿಕ್ಕುಗಳು ನಾವು. ನಾಳೆ ಅಮ್ರಪಾಲಿಯ ಮನೆಗೆ ಬರುವುದಾಗಿ ಮಾತು ಕೊಟ್ಟಿದ್ದೇವೆ' ಎಂದರಂತೆ. ಆಗ ಆತ ಮುನಿಸಿನಿಂದ, 'ಆಕೆ ವೇಶ್ಯೆ. ನಾನೋ ರಾಜಕುಮಾರ. ನನ್ನ ಮಾತಿಗೆ ಬೆಲೆಯಿಲ್ಲವೇ?' ಎಂದು ಜೋರುದನಿಯಲ್ಲಿ ಹೇಳಿದನಂತೆ. ಆಗ ಬುದ್ಧರು ಶಾಂತವಾಗಿ, 'ವೇಶ್ಯೆಯೋ, ನಗರವಧುವೋ, ಕುಲಟೆಯೋ, ಸವತಿಯೋ ಮುಖ್ಯವಲ್ಲ. ಅವರೂ ಮನುಷ್ಯರು ತಾನೇ? ಈಗಾಗಲೇ ಮಾತು ಕೊಟ್ಟಾಗಿದೆ. ಮಾತು ತಪ್ಪಲು ಸಾಧ್ಯವಿಲ್ಲ. ನಾಳೆ ನಾವು ತಿನ್ನುವ ಅಮ್ರಪಾಲಿಯ ಮನೆಯ ಅನ್ನದ ಮೇಲೆ ನಮ್ಮ ಹೆಸರು ಬರೆದಾಗಿದೆ. ಅಪೇಕ್ಷೆಪಟ್ಟರೆ ನಾಡಿದ್ದು ಬೇಕಾದರೆ ನಿಮ್ಮೆಡೆಗೆ ಬರುವೆವು' ಎಂದರಂತೆ.

ರಾಜಕುಮಾರ ನನ್ನೆಡೆಗೆ ಬಂದು, 'ನೀನೇ ಒಪ್ಪಿಸು ಅವರನ್ನು. ಎಷ್ಟು ಬೇಕೋ ಹೊನ್ನು ಕೇಳು ನಿನಗೆ' ಎಂದ. 'ಬುದ್ಧರ ಆಗಮನಕ್ಕಿಂತ ಹೆಚ್ಚೇ ನನಗೆ ನಿನ್ನ ಹೊನ್ನು?' ಎಂದು ತಿರಸ್ಕರಿಸಿ ಕಳಿಸಿದೆ.